IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಏಳೂರು ಹಬ್ಬದ : ಸಾಂಸ್ಕೃತಿಕ ವಿಶ್ಲೇಷಣೆ

ಡಾ. ಬಿ. ಎಸ್. ಹೇಮಲತ
ಮಾರ್ಗದರ್ಶಕರು
ಕನ್ನಡ ವಿಭಾಗ
ಜೈನ್ ವಿಶ್ವವಿದ್ಯಾಲಯ

ಸೌಮ್ಯ. ಆರ್
ಸಂಶೋಧನಾರ್ಥಿ
ಜೈನ್ ವಿಶ್ವವಿದ್ಯಾಲಯ

ಪೀಠಿಕೆ : ಪ್ರಾಚೀನ ಕಾಲದಿಂದಲೂ ಆಚರಣೆಯಗಳು, ನಂಬಿಕೆಗಳು, ಸಂಪ್ರದಾಯಗಳು, ಹಬ್ಬಗಳು, ಜಾತ್ರೆಗಳು ಆಯಾ ಸಂಸ್ಕೃತಿಯನ್ನು ಪ್ರತಿನಿಧಿಸುವ ಪ್ರಧಾನ ಅಂಶಗಳಲ್ಲಿ ಒಂದಾಗಿದೆ. ಅವರವರ ನಂಬಿಕೆಯಾಧಾರದಲ್ಲಿ ಭಯಭಕ್ತಿಯಿಂದ ಹಬ್ಬಗಳನ್ನು ಮಾಡಿಕೊಂಡು ಬಂದಿದ್ದಾರೆ. ಅವುಗಳನ್ನು ಇಂದಿಗೂ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಮುಖ್ಯವಾಗಿ "ಊರಹಬ್ಬ ಮತ್ತು ಮಾರಿಹಬ್ಬ ಪ್ರಮುಖ" ದಕ್ಷಿಣ ಭಾರತದಲ್ಲಿ ಸಂಪ್ರದಾಯ ಬದ್ದವಾಗಿ ವೈಶಿಷ್ಟವಾಗಿ ಆಚರಿಸುತ್ತಾ ಬಂದಿದ್ದಾರೆ. ಇಂತಹ ಹಲವು ಹಬ್ಬಗಳಲ್ಲಿ "ಏಳೂರು ಹಬ್ಬ ವಿಭಿನ್ನವಾಗಿ ಸಂಭ್ರಮಿಸುತ್ತಾರೆ. ಕರ್ನಾಟಕದಾದ್ಯಂತವಾಗಿ ತುಂಬಾ ಗ್ರಾಮಸ್ಥರು ಅಚರಿಸಲಾಗುವ ಸಾಂಪ್ರದಾಯಿಕ ಗ್ರಾಮೀಣ ಹಬ್ಬವಾಗಿದೆ. ಇದನ್ನು ಸಾಂಕ್ರಾಮಿಕ ರೋಗಗಳಿಂದ ರಕ್ಷಣೆ, ಮಾಟ, ಮಂತ್ರ, ಹರಕೆಗಳ ತೀರಿಸಲು, ಮಳೆ – ಬೆಳೆ ಹೆಚ್ಚಿಸಲು ಹಾಗೂ ಗ್ರಾಮದ ಒಳತಿಗಾಗಿ ಅವರ ಗ್ರಾಮದೇವತೆಯಾದ ಮಾರಿಯಮ್ಮನ ಹೆಸರಿನಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ

ದ್ರಾವಿಡ ಸಂಸ್ಕೃತಿಯು ಸ್ತ್ರೀ ಪ್ರಧಾನ ಸಂಸ್ಕೃತಿಯ ಪಳೆಯುಳಿಕೆಗಳಿಂದ ಅಚರಿಸಲ್ಪಡುವ ಮಾರಿಹಬ್ಬವೂ ವೈಜ್ಞಾನಿಕ ಮತ್ತು ಜಾನಪದ ಹಿನ್ನಲೆ ಆಚರಣೆಗೆ ಒಳಪಟ್ಟಿದೆ. ಮುಖ್ಯವಾಗಿ ಆದೂರು, ಇಂಡ್ಲವಾಡಿ, ತಿಮ್ಮಸಂದ್ರ, ನಾಗಯ್ಯನದೊಡ್ಡಿ, ಕಾಡುಜಕ್ಕನಹಳ್ಳಿ, ಬಗ್ಗನದೊಡ್ಡಿ ಮತ್ತು ಮೈಸೂರಮ್ಮನ ದೊಡ್ಡಿ ಗ್ರಾಮಗಳೆಲ್ಲ ಸೇರಿ" ಏಳೂರು ಹಬ್ಬ ಎಂಬ ಹೆಸರಿನಲ್ಲಿ ಹಲವು ವರ್ಷಗಳಿಗೊಮ್ಮೆ ಈ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬವನ್ನು 7 ದಿನಗಳ ಕಾಲ ನಡೆಸುತ್ತಾರೆ. ಈ ವರ್ಷ 29/04/2026ರ ಬುಧವಾರದಿಂದ 05/05/2026ರ ಮಂಗಳ ವಾರಗಳ ಕಾಲ ನೆರವೇರಿತು. ಈ ಊರಹಬ್ಬದ ವೈವಿಧ್ಯತೆ ವಿವಿಧ ಭಾಷೆಯನ್ನಾಡುವವರು ಮತ್ತು ವಿವಿಧ ಸಂಸ್ಕೃತಿಯ ಜನಾಂಗದವರು ಸೇರಿ ಆಚರಿಸುವುದು ವಿಶೇಷವಾಗಿದೆ. ಇದೇ ಹಬ್ಬದಲ್ಲಿ ಅರವು ಜನಾಂಗದವರು ಸಹ ಈ ಹಬ್ಬದಲ್ಲಿ ಪಾಲ್ಗೊಳ್ಳುವ ಮೂಲಕ ಅರವು ಜನಾಂಗದವರು ತಮ್ಮ ಸಂವಹನದ

ಮೂಲಕ ಬಹು ಜನಾಂಗದವರೊಂದಿಗೆ ಸೇರಿ ಅರವು ಭಾಷೆಯನ್ನು ಬಳಸುವುದನ್ನು ಪ್ರಧಾನವಾಗಿ ಕಾಣಬಹುದಾಗಿದೆ. ಅರವು ಭಾಷೆ ಮಾತನಾಡುವವರು ಸಹ ಮಾರಿಹಬ್ಬ ಮತ್ತು ಊರಹಬ್ಬವನ್ನು ಆಚರಿಸುವುದನ್ನು ಗಮನಿಸಲಾಗುತ್ತದೆ.

**ಮಾರಿಹಬ್ಬದ ಹಿನ್ನಲೆ ಕಥೆ: 01**

ಈ ಊರಹಬ್ಬದ ಹಿನ್ನೆಲೆಯನ್ನು ವಕ್ತೃವಾದ ಚಂದ್ರಪ್ಪರವರು ಹೇಳುವುದು ಹೀಗೆ ಒಂದು ದಿನ ಕೆಳವರ್ಗಕ್ಕೆ ಸೇರಿದ ವ್ಯಕ್ತಿಯೂ ಬ್ರಾಹ್ಮಣರ ಮಗಳನ್ನು ಸುಳ್ಳು ಹೇಳಿ ವಿವಾಹವಾಗಿರುತ್ತಾನೆ .ಕೆಲವು ದಿನಗಳ ನಂತರ ಈ ವಿಷಯ ತಿಳಿದ ಬ್ರಾಹ್ಮಣರ ಹುಡುಗಿಯು ಕೋಪಗೊಂಡು ಮಾರಿಯ ರೂಪತಾಳಿ ಅವನ ಗಂಡನನ್ನು ಬಲಿ ಪಡೆಯುತ್ತಾಳೆ. ಇದೇ ಮುಂದೆ ಮಾರಿಹಬ್ಬ ಆಗಿದೆ. ಅದಕ್ಕೆ ಪ್ರಾಣಿರೂಪದಲ್ಲಿ ಬಲಿಯನ್ನು ನೀಡಲಾಗುತ್ತದೆ.

**ಮಾರಿಹಬ್ಬದ ಹಿನ್ನಲೆ ಕಥೆ: 02**

ಆನೇಕಲ್ ತಾಲ್ಲೂಕಿಗೆ ಸೇರಿದ ಇಂಡ್ಲವಾಡಿ ಗ್ರಾಮಕ್ಕೆ ಮಾರಿಯಮ್ಮ ಎಂದು ಒಂದು ಹೆಣ್ಣು ಮಗಳ ರೂಪದಲ್ಲಿ ಬ್ರಾಹ್ಮಣ ಕುಟುಂಬದ ಜೊತೆಗೆ ನಿಮ್ಮ ಊರಿಗೆ ಬರುತ್ತೇನೆಂದು ಕೇಳಿಕೊಂಡು ಅವರ ಜೊತೆ ಬಂಡಿ ಕಟ್ಟಿಕೊಂಡು ಬರುತ್ತಾರೆ. ಅವರೊಂದಿಗೆ ಅವರ ಮನೆಯಲ್ಲಿಯೇ ಇದ್ದು ನಂತರ ಅವರಿಗೆ ಯಾವ ಸ್ಥಳ ಇಷ್ಟವಾಗುತ್ತೋ ಅ ಜಾಗದಲ್ಲಿ ಕುಳಿತುಕೊಂಡರು. ಅದೇ ಜಾಗದಲ್ಲಿಯೇ ಮಾರಿಯಮ್ಮನನ್ನು ಪ್ರತಿಷ್ಟಾಪಿಸಲಾಯಿತು ಎಂಬ ಮಾಹಿತಿಯನ್ನು ಶ್ರೀನಿವಾಸ ಎಂಬ ವಕ್ತೃ ತಿಳಿಸಿದರು.

**ಈ ಹಬ್ಬದ ವೈವಿಧ್ಯತೆ ವಿಶೇಷತೆ** : ಈ ಏಳೂರು ಜಾತ್ರೆಯೂ ನೂರು ವರುಷಗಳ ಹಿಂದೆ ಮಾಡಿದ್ದರು. ಈಗ ಮತ್ತೆ 2026ನೇ ವರುಷದಲ್ಲಿ ಒಟ್ಟಾಗಿ ಏಳೂರು ಹಬ್ಬವನ್ನು ಮಾಡುತ್ತಿದ್ದಾರೆಂದು ವಕ್ತೃರಾದ ಪ್ರಸನ್ನರವರು ತಿಳಿಸಿದರು. ಇದಕ್ಕೆ ಸಾಕ್ಷಿಯೆಂಬಂತೆ ಇಂಡ್ಲವಾಡಿ ಗ್ರಾಮದ ಮುಖ್ಯಸ್ಥರಾದ ಶ್ರೀನಿವಾಸರವರು ಹೇಳುವಂತೆ 1954ರಲ್ಲಿ ಈ ಏಳೂರು ಜಾತ್ರೆಯನ್ನು ಮಾಡಿದ್ದರು. ಈ ಹಬ್ಬವನ್ನು ಮಾಡುವ ವಿಧಾನದ ಕುರಿತು ಬರಹದಲ್ಲಿ ಬರೆದಿಟ್ಟಿದ್ದಾರೆಂದು ಅದನ್ನು ಅನುಸರಿಸಿ ಈ ವರುಷ ಜಾತ್ರೆ ಮಾಡಲಾಗಿದೆ . ಅವರ ಮಾಹಿತಿಯಾಧಾರದ ಮೇಲೆ ಇದು ಅತ್ಯಂತ ಮಹತ್ವದ ಹಬ್ಬವಾಗಿದೆ. ಕಾರಣ ಈ ಹಬ್ಬಕ್ಕೆ ಎಲ್ಲಾ ಸಮುದಾಯದ ಜನರು ಸಮಾನ ಮನಸ್ಕರಾಗಿ ಪಾಲ್ಗೊಂಡು ಶಾಂತಿಯುತವಾಗಿ ಸಾಮರಸ್ಯದಿಂದ ಹಬ್ಬವನ್ನು ಆಚರಿಸುತ್ತಾರೆ. ವಕ್ತೃ ಮೂರ್ತಿಯವರು ಮಾಹಿತಿಯನ್ನು ನೀಡಿದಂತೆ ಈ ಊರಹಬ್ಬದಲ್ಲಿ ಅರವು ಜನಾಂಗದವರು, ಕುರುಬರು, ಬಳಜಿಗರು, ಬಂಜಾರ, ಲಂಬಾಣಿ ಮೊದಲಾದ ಸಮುದಾಯದವರು ಸೇರಿ ಈ ಹಬ್ಬವನ್ನು ಮಾಡುತ್ತಾರೆ. ಆಗಾಗಿ ಈ ಹಬ್ಬವೂ ಬಹುಜನಾಂಗದ ಬಹುಸಂಸ್ಕೃತಿಯನ್ನು ವಿಶೇಷವಾಗಿ ಇಲ್ಲಿ ಕಾಣಬಹುದು.

**ಉದ್ದೇಶ:**

ಈ ಏಳೂರು ಹಬ್ಬವನ್ನು ಹಿರಿಯರು ಮಾಡುತ್ತಿದ್ದರು. ಆದರೆ ಪ್ರತಿ ವರ್ಷವೂ ಊರಬ್ಬ ಮಾಡುತ್ತಾರೆ. ಅವರವರ ಊರಿನ ಸಂಪ್ರದಾಯ ಆಚರಣೆಯಂತೆ ಆದೇ ರೀತಿಯಲ್ಲಿ ನಡೆಸುತ್ತಾರೆ . ಆದರೆ ಪ್ರತಿವರ್ಷದ ಊರಬ್ಬಕ್ಕೆ, ಏಳೂರು ಹಬ್ಬಕ್ಕೆ ತುಂಬಾ ವಿಭಿನ್ನತೆಗಳಿವೆ. ಊರಬ್ಬ ಊರಿನವರು ಮಾತ್ರ ಸೇರಿ ಮಾಡುತ್ತಾರೆ. ಏಳೂರಬ್ಬವೂ ವಿಭಿನ್ನ ಭಾಷೆ. ಸಂಸ್ಕೃತಿ, ಸಂಪ್ರದಾಯ, ನಂಬಿಕೆ, ಆಚರಣೆಯನ್ನು ಅನುಸರಿಸುವವರೆಲ್ಲರೂ ಸೇರಿ ಮಾಡುತ್ತಾರೆ. ಈ ಏಳೂರುಗಳು ಸೇರಿದ ಗ್ರಾಮದವರು ತಮ್ಮ ತಮ್ಮ ಊರಿಗಳಲ್ಲಿ ಹಬ್ಬ ಮಾಡುತ್ತಾರೆ. ಊರಿನ ಜನರಿಂದ ಏನಾದರೂ ತಪ್ಪುಗಳಾಗಿದ್ದರೆ ಶಾಂತಿ ಆಗಲಿ ಎಂದೂ ಮಾಡುತ್ತಾರೆ. ಮಕ್ಕಳಿಗೆ ಮನೆಯ ಸದಸ್ಯರಿಗೆ ಒಳ್ಳೆಯದಾಗಲಿ ಎಂದೂ, ಹಿರಿಯರ ಅಚರಣೆಯನ್ನು ಇಂದಿನ ಕಿರಿಯರಿಗೂ ತಿಳಿಯಲಿ ಎನ್ನುವ ಉದ್ದೇಶದಿಂದಲೂ ಮಾಡುತ್ತಾರೆ. ಈ ಮಾರಿಹಬ್ಬವನ್ನು ಏಳೂರು ಜನರು ಅವರ ಸಂಪ್ರದಾಯದಂತೆ ಮಾಡಿದರು. ಒಂದು ದಿನ ಏಳೂರು ಜನರು ಇಂಡ್ಲವಾಡಿಯ ಗ್ರಾಮಕ್ಕೆ ಬಂದು ದೀಪಗಳನ್ನು ತಂದು ಸಾಮೂಹಿಕವಾಗಿ ಸೇರಿ ತಂಬ್ಬಿಟ್ಟಿನ ದೀಪವನ್ನು ಮಾರಿಯಮ್ಮ ದೇವಿಗೆ ಬೆಳಗುವ ಮೂಲಕ ದೇವಿಯನ್ನು ಭಕ್ತಿಯಿಂದ ಆರಾಧಿಸುವ ಪದ್ಧತಿಗೆ ಏಳೂರು ಹಬ್ಬ ಎಂದು ಕರೆಯುತ್ತಾರೆ. ಮಾರಿಯಮ್ಮ ಇಂಡ್ಲವಾಡಿ ಗ್ರಾಮದ ಗ್ರಾಮದೇವತೆಯಾಗುತ್ತಾರೆ.

**ಊರಹಬ್ಬದ ಆಚರಣೆಯ ವಿಧಾನ:-**

ಹೊಳೆ ಮೆಟ್ಟುವುದು:- ಮೊದಲನೆ ದಿನವೇ ಕರಗದಮ್ಮ ಮತ್ತು ಶ್ರೀ ಯಲ್ಲಮ್ಮ ದೇವರುಗಳಿಗೆ ಪವಿತ್ರವಾದ ಗಂಗೆಯನ್ನು ಪೂಜೆಮಾಡಿ ನಮಸ್ಕರಿಸಿ ಹೊಳೆಯನ್ನು ಮುಟ್ಟಿಪೂಜೆ ಸಲ್ಲಿಸಿ ಅಲ್ಲಿಂದ ನೀರನ್ನು ತಂದು ದೇವರುಗಳಿಗೆ ಅಭಿಷೇಕ ಮಾಡುತ್ತಾರೆ. ಅದನ್ನು ಹೊಳೆ ಮೆಟ್ಟುವುದು ಎನ್ನುತ್ತಾರೆ.

ಏಳೂರು ಹಬ್ಬವೂ 7 ದಿನಗಳ ಕಾಲ ನಡೆಯುತ್ತದೆ. 29/04/2026 ರಂದು ಬುಧವಾರದಂದು ಊರು ಕಾಪು ಕಟ್ಟುವುದು ಎಂಬುದರಿಂದ ಹಬ್ಬವನ್ನು ಪ್ರಾರಂಭಿಸುತ್ತಾರೆ. ಊರು ಕಾಪು ಕಟ್ಟುವುದು ಎಂದರೆ 'ತೊಟ್ಟಿ' ಎಂದರ್ಥ. ಹಿಂದಿನ ಕಾಲದಲ್ಲಿ ಊರುತೊಟ್ಟಿ ಎನ್ನುತ್ತಿದ್ದರು. ಇವರು ಅಕ್ಕಿಯನ್ನು ಕುಂಕುಮದೊಂದಿಗೆ ಬೆರೆಸಿ ಕೆಂಪಾಕ್ಕಿಯಾಗಿ ಮಾಡಿಕೊಳ್ಳುತ್ತಾರೆ. ಊರಿನಲ್ಲಿರುವ ಡೊಬಿಗಳು/ಅಗಸರು ಗಂಜಲ, ಮಡಕೆಯ ತುಂಬಾ ನೀರು, ತೀರ್ಥ, ಎಲ್ಲವನ್ನು ಅವರ ಹಿಂದೆಯೇ ಈ ಕೆಂಪಾಕ್ಕಿಯನ್ನು ಸ್ವಲ್ಪ ಸ್ವಲ್ಪವೇ ಚೆಲ್ಲಿಕೊಂಡು ಹೊಗುತ್ತಾರೆ. ಇದನ್ನು ೭ ದಿನಲೂ ಮಾಡುತ್ತಾರೆ. ಇದನ್ನು ಊರು ಕಾಪು ಕಟ್ಟುವುದು ಎನ್ನುತ್ತಾರೆ. ಊರುಕಾಪು ಕಟ್ಟಿದ ಮೇಲೆ ಈ ಊರಿನಲ್ಲಿರುವ ಯಾರೊಬ್ಬರು ಮೊಟ್ಟೆ ಮಾಂಸವನ್ನು ಬೇಯಿಸುವುದಿಲ್ಲ. ಹೀಗೆ ಮಾಡಿದರೆ ಶಾಂತಿಕರವಾಗುತ್ತದೆಂಬ ಬಲವಾದ ನಂಬಿಕೆ ಊರಿನವರಿಗೆ ಆಗಾಗಿ ಇದನ್ನು ಕಟ್ಟುನಿಟ್ಟಿನಿಂದ ಪಾಲಿಸುತ್ತಾರೆ. ಅಗಸರ ಕೈಯಲ್ಲಿ ಊರಿಗೆ ಕಾಪು ಕಟ್ಟಿಸಿರುತ್ತಾರೆ. ಇವರನ್ನು ಊರಿನ ಮಧ್ಯದಲ್ಲಿ ಒಂದು ದೇವಸ್ಥಾನ ಮಧ್ಯೆ ಅವರಿಗೆಂದು ಪ್ರತ್ಯೇಕವಾಗಿ ಒಂದೊಂದು ಮನೆಯಿಂದಲೂ ಅವರಿಗಾಗಿ ಅಡುಗೆಯನ್ನು ಮಾಡಿ ತೆಗೆದುಕೊಂಡು ಹೋಗಿ ನೀಡುತ್ತಾರೆ. ಈ ಊರಬ್ಬ ಮಾರಿಹಬ್ಬ ಮುಗಿಯುವವರೆಗೂ ಅವರ ಮನೆಗೆ ಹೋಗುವಂತಿರುವುದಿಲ್ಲ. ಒಂದು ಸ್ನಾನ ಮಾಡಿಕೊಂಡು ಅಲ್ಲೇ ವಾಸ ಮಾಡಬೇಕಾಗಿರುತ್ತದೆ. ನಂತರ ಕೊನೆಯಲ್ಲಿ ಅವರ ಕೈಯಿಂದ ಅಮ್ಮನವರನ್ನು ಕರೆದುಕೊಂಡು ಹೋಗುತ್ತಾರೆ. ಸಾಗು ಹಾಕಿಕೊಂಡು ಹೋದ ನಂತರ ಅವರ ಊರಿನಲ್ಲಿರುವ ಪೀಡೆ, ಪಿಶಾಚಿ, ನಕರಾತ್ಮಕ. ಅಂಶಗಳನ್ನು ಆಚೆ

ಹೋಗಲೆಂದು ಮಾರಿಹಬ್ಬದ ನಂತರ ಅಗಸರ ಕೈಯಲ್ಲಿಯೇ ಹೊರ ಕಳಿಸಿದ್ದೇವೆಂದು ಇಂದಿಗೂ ನಂಬುತ್ತಾರೆ. ಇಲ್ಲಿ ಎಲ್ಲರಿಗೂ ಶಾಂತಿಯಾಯಿತ್ತು ಎಂದು ಭಾವಿಸುತ್ತಾರೆ. ಮುಂದೆ 30/04/2026 ರಂದು ಬಿಡುವು ದಿನ , 01/05/2026ರಂದು ಮಾರಿಯಮ್ಮ ಮತ್ತು ಕಂಬದ ರಾಯನಿಗೆ ಕಲ್ಯಾಣೋತ್ಸವ ಬಗೆಬಗೆಯ ವಾದ್ಯಗಳೊಂದಿಗೆ ಅದ್ದೂರಿಯಾಗಿ ಮದುವೆಯನ್ನು ಮಾಡುತ್ತಾರೆ. ಕುಂಬಾರರ ಪಾತ್ರ ಮಹತ್ವದಾಗಿದೆ. ಕುಂಬಾರರಿಂದಲೇ ಕಂಬದರಾಯನ ಗೊಂಬೆಯನ್ನು ಮಾಡಿಸುತ್ತಾರೆ. ಇದನ್ನು ಮಾಡಿದ ಮೇಲೆ ಕುಂಬಾರರು ಊರಿನಲ್ಲಿ ಯಾವುದೇ ಕಾರಣಕ್ಕೂ ಹಬ್ಬವನ್ನು ಮಾಡುವಂತಿಲ್ಲ . ಇಂಡ್ಲವಾಡಿ ಗ್ರಾಮದಲ್ಲಿರುವ ಒಂದೇ ಕುಂಬಾರ ಮನೆ. ಅವರಿಂದಲೇ ಕಂಬದರಾಯನ ಕೈಯಲ್ಲಿ ಗೊಂಬೆಮಾಡಿಸಿ ಅವರೇ ಆ ದೇವರನ್ನು ತೆಗೆದುಕೊಂಡು ಮದುವೆಗಂಡನ್ನು ಕರೆದುಕೊಂಡು ಬರುವಂತೆ ಕಲ್ಯಾಣೋತ್ಸವಕ್ಕೆ ಬರುತ್ತಾರೆ. ಮದುಮಗನಾದ ಕಂಬದರಾಯನನ್ನು ಮರಿಯಮ್ಮ ದೇವಾಸ್ಥಾನದ ಮುಂದೆ ಹಿಡುತ್ತಾರೆ. ಪುರೋಹಿತರನ್ನು  ಕರೆಸಿ ಬೃಹತ್ ಗಾತ್ರದಲ್ಲಿ ಹೋಮಹಾಕಿ, ಪೂಜೆಯನ್ನು ಮಾಡಿ ಶಾಸ್ತ್ರೋಕ್ತವಾಗಿ ಮದುವೆಯನ್ನು ಊರಿನ ಗ್ರಾಮದವರ ಎದುರಿಗೆ ವಿಜೃಂಭಣೆಯಿಂದ ಮಾಡುತ್ತಾರೆ. 02/05/2026ರಂದು ಕಂಬದ ರಾಯನ ತಂಗಿಯಾದ “ಸತ್ಯಮ್ಮ” ನನ್ನು ತಂದು ದೇವಸ್ಥಾನದ ಮುಂದೆ ಇಟ್ಟು 7 ದಿನಗಳ ಕಾಲ ಪೂಜೆ ಮಾಡುತ್ತಾರೆ. ಕೊನೆಯ ದಿನದಲ್ಲಿ ಸತ್ಯಮ್ಮನ ಜೊತೆಯಲ್ಲಿ “ತಣ್ಣಿ ಮುದ್ದೆಗಳು” ಎಂದು ಮಾಡುತ್ತಾರೆ. ಆ ಮುದ್ದೆಗೆ ತುಪ್ಪಹಾಕಿ ಮಾರಿಯಮ್ಮನ ದೇವಾಲಯದ ನಡುಬೀದಿಯಲ್ಲಿ ತಣ್ಣಿ ಮುದ್ದೆಯನ್ನು ಇಡುತ್ತಾರೆ. ಅದನ್ನು ಅಗಸರ ಡೊಬ್ಬಿಗಳು ಅದನ್ನು ತೆಗೆದುಕೊಂಡು ಹೋಗಿ ಆ ಊರಿನಿಂದ ಆಚೆಗೆ ಕೆರೆಯಲ್ಲಿ ಇಟ್ಟು ಬರುತ್ತಾರೆ. ಅಲ್ಲಿಗೆ ಈ ಜಾತ್ರೆ ಸಂಪೂರ್ಣವಾಗಿದೆ ಎಂದು ಭಾವಿಸುತ್ತಾರೆ.

ಮಾರಿ ಮತ್ತು ಕಂಬದ ರಾಯನ ಕಲ್ಯಾಣೋತ್ಸವ ಮುಗಿದ ಮುಂದಿನ ದಿನ 3/5/2026ರ ಶನಿವಾರ ಶ್ರೀ ಲಕ್ಷ್ಮೀ ವೆಂಕಟೇಶ್ವರ ಕಲ್ಯಾಣೋತ್ಸವ ಆಚರಿಸುತ್ತಾರೆ. ಇದನ್ನು ಗಿರಿಜಾ ಕಲ್ಯಾಣೋತ್ಸವ ಎನ್ನುತ್ತಾರೆ.  ಮಾರಿಯಮ್ಮ ಮತ್ತು ಕಂಬದರಾಯರು ಗಾವು ಇದ್ದಾಗ ಹಾಗಾಗಿ ಇವರ ಪೂಜೆ ಮೊದಲು ಮಾಡಿ ನಂತರ ಶಾಂತಿ ಪೂಜೆಯೆಂದು ಗಿರಿಜಾ ಕಲ್ಯಾಣೋತ್ಸವ ಮಾಡುತ್ತಾರೆ. ಇಡೀ ಊರನ್ನು ಸಂರಕ್ಷಿಸುವವರೆಂದು ಮಾಡುತ್ತಾರೆ. ಅದೇ ದಿನ ಮನರಂಜನೆಗೆಂದು ಹಾಡುಗಳ ಕಾರ್ಯಕ್ರಮ ಇರುತ್ತದೆ. 4/05/2026 ಭಾನುವಾರದಂದು ಗ್ರಾಮ ದೇವತೆಗಳ ಪಲ್ಲಕ್ಕಿ ಉತ್ಸವ” ಇರುತ್ತದೆ. ಏಳೂರಿನ ಊರಿನಲ್ಲಿರುವ ದೇವರುಗಳಿಗೆಲ್ಲಾ ಪಲ್ಲಕ್ಕಿಯನ್ನು ಮಾಡಿಸಿ ಒಂದೆಡೆಗೆ ತರುತ್ತಾರೆ. ಅದೇ ದಿನ ಏಳೂರುನವರು ಸೇರಿ ಒಂದೇ ದೀಪವನ್ನು ಗ್ರಾಮದೇವತೆಯಾದ ಮಾರಿಯಮ್ಮನಿಗೆ ದೀಪವನ್ನು ತರುತ್ತಾರೆ. ಶ್ರೀ ಬಸವೇಶ್ವರಸ್ವಾಮಿ ಪಲ್ಲಕ್ಕಿ, ಶ್ರೀ ಮುನೇಶ್ವರ ಸ್ವಾಮಿ ಪ್ರಸನ್ನ, ಶ್ರೀ ಯಲ್ಲಮ್ಮ ದೇವಿ ಪಲ್ಲಕ್ಕಿ, ಶ್ರೀ ಶನೇಶ್ವರ ಸ್ವಾಮಿ, ಕರಗದಮ್ಮ ಮುಂತಾದ ಪಲ್ಲಕ್ಕಿಯನ್ನು ಮಾಡುತ್ತಾರೆ.

05/05/2026 “ ಶ್ರೀ ಬಸವೇಶ್ವರ ಸ್ವಾಮಿಗೆ ರುದ್ರಾಭಿಷೇಕ ” ಇರುತ್ತದೆ. ಬಸವೇಶ್ವರ ಇಲ್ಲದೆ ಉಳಿಗಾಲ ಇಲ್ಲ ಎಂಬ ನಂಬುಗೆ ಇವರಲ್ಲಿದೆ. ಅದಕ್ಕಾಗಿಯೇ ಹೊಲವನ್ನು ಉತ್ತು ಅನ್ನವನ್ನು ಹಾಕಿದವರು ಎಂದು ಅವರಿಗೂ ಶಾಂತಿಕರ ಆಗಲಿ ಎಂದೂ ರುದ್ರಾಭಿಷೇಕ ಮಾಡಿಸುತ್ತಾರೆ. ಬಗೆ ಬಗೆಯಾಗಿ ಅಲಂಕಾರಿಸಿ ಪೂಜೆಯನ್ನು ಸಲ್ಲಿಸುತ್ತಾರೆ. ನಂತರದಲ್ಲಿ ಅಗ್ನಿಕೊಂಡ ಪ್ರವೇಶದ ಪೂಜೆ ಮಾಡುತ್ತಾರೆ. ಅಗ್ನಿಕೊಂಡ ಹಾಕಿ ಅದರಲ್ಲಿ ಮಾರಿಯಮ್ಮನನ್ನು ಹೊತ್ತುಕೊಂಡ ವ್ಯಕ್ತಿಯೂ ದೇವಿಯನ್ನು ಎತ್ತಿಕೊಂಡು

ಕೊಂಡದಲ್ಲಿ ನಡೆದು ಹೋಗಬೇಕು. ಅನಂತರ ಉಳಿದ ಭಕ್ತಾದಿಗಳು ಕೊಂಡ ತುಳಿದು ಪ್ರಾರ್ಥಿಸುತ್ತಾರೆ.

ಹೀಗೆ ಇಡೀ ಏಳೂರು ಮಾರಿಯಮ್ಮನ ಊರಬ್ಬದಲ್ಲಿ ಮೊದಲು ಹೊಳೆ ಮೆಟ್ಟ ಮಾಡುವದರ ಮೂಲಕ ಪ್ರಾರಂಭಿಸುತ್ತಾರೆ. ನಂತರ ದೀಪಗಳನ್ನು ಮಾಡಿ ಏಳೂರಿನ ಜನರು ಮಾರಿಯಮ್ಮನ ದೇವಾಲಯದಲ್ಲಿ ತಂಬಿಟ್ಟಿನಿಂದ ಮಾಡಿದ ದೀಪಿಗಳನ್ನು ಬೆಳಗುತ್ತಾರೆ. ಮುಂದೆ ಬೆಲ್ಲದಾರತಿ ಮಾಡುತ್ತಾರೆ. ವಿಶೇಷವಾಗಿ ಬೆಲ್ಲದಾರತಿಯನ್ನು ಗಂಡು ದೇವರಿಗೆ ಮಾತ್ರ ಮಾಡುತ್ತಾರೆ. ನಂತರದಲ್ಲಿ ಹಬ್ಬಗಳೆಲ್ಲ ಮುಗಿದ ಮೇಲೆ ಮಾಂಸದೂಟ ಮಾಡುತ್ತಾರೆ. ಇದಾದ ಮೇಲೆ ತಣ್ಣಿ ಮುದ್ದೆಗಳನ್ನು ಮಾಡಿ ಅಮ್ಮನವರನ್ನು ಸಾಗುಹಾಕುತ್ತಾರೆ. ರಾಗಿಯ ಮುದ್ದೆ ಮಾಡಿ ಅದಕ್ಕೆ ತುಪ್ಪಹಾಕಿ ಅದನ್ನು ಎತ್ತಿಕೊಂಡು ಹೋಗಿ ಚಿಕ್ಕ ಚಿಕ್ಕತಟ್ಟೆಯಲ್ಲಿ ಮಾರಿಯಮ್ಮನ ದೇವಾಸ್ಥಾನದ ಮುಂದೆ ಇಡುತ್ತಾರೆ. ಅದನ್ನೆಲ್ಲಾ ಅಗಸರು ಒಂದು ಮೂಟೆಕಟ್ಟಿ ಕೆರೆಯಲ್ಲಿ ಇಟ್ಟು ಬರುತ್ತಾರೆ. ಅಲ್ಲಿಗೆ ಊರಿನಲ್ಲಿದ್ದ ದುಷ್ಟ ದೋಷಗಳು, ಮಾಟ, ಮಂತ್ರಗಳೆಲ್ಲಾ ದೂರ ಹೋದವು ಮುಂದೆ ಒಳ್ಳೆಯದಾಗುತ್ತದೆಂದು ಎಲ್ಲರೂ ಭಾವಿಸುತ್ತಾರೆ.

**ವಕ್ತೃಗಳ ವಿವರ:**

1. ಹೆಸರು: ಮಹದೇವಪ್ಪ -ವಯಸ್ಸು: 60 - ಊರು :ಇಂಡ್ಲವಾಡಿ
2. ಹೆಸರು: ಶ್ರೀನಿವಾಸ -ವಯಸ್ಸು: 54 – ಊರು: ಇಂಡ್ಲವಾಡಿ
3. ಹೆಸರು: ಮೂರ್ತಿ ಎಸ್ ಸಿ - ವಯಸ್ಸು :40 – ಊರು: ಸೊಪ್ಪಹಳ್ಳಿ